ಕರ್ನಾಟಕ ಸಾದಿಲ್ವಾರು ನಿಧಿ ಅಧಿನಿಯಮ, 1957

(ಕರ್ನಾಟಕ ರಾಜ್ಯಪತ್ರ, ಗುರುವಾರ, ಆಗಸ್ಟ್ 24, 2006, ಭಾಗ - IV, 1473 ರಿಂದ 1477ರ ವರೆಗಿನ ಪುಟಗಳಲ್ಲಿ ಪ್ರಕಟಿತವಾಗಿದೆ)

ಪ್ರಕರಣಗಳ ಅನುಕ್ರಮಣಿಕೆ

ಪ್ರಕರಣಗಳು:

1. ಚಿಕ್ಕ ಹೆಸರು
2. ಸಾದಿಲ್ವಾರು ನಿಧಿಯ ಸ್ಥಾಪನೆ
3. ಸಾದಿಲ್ವಾರು ನಿಧಿಯ ಅಭಿರಕ್ಷೆ ಮತ್ತು ಅದರಿಂದ ಹಣ ಹಿಂತೆಗೆಯುವುದು
4. ನಿಯಮ ರಚನಾಧಿಕಾರ

ಉದ್ದೇಶ ಮತ್ತು ಕಾರಣಗಳ ಹೇಳಿಕೆ

I

1957ರ ಅಧಿನಿಯಮ 11.- 1950ರ ಮೈಸೂರು ಅಧಿನಿಯಮ XXI ಇದು ಹಿಂದಿನ ಮೈಸೂರು ರಾಜ್ಯದ ಸಲುವಾಗಿ 30 ಲಕ್ಷ ರೂಪಾಯಿ ಮೊತ್ತವನ್ನು ಒಳಗೊಂಡ ಸಾದಿಲ್ವಾರು ನಿಧಿಯ ಸ್ಥಾಪನೆಗೆ ಉಪಬಂಧ ಕಲ್ಪಿಸಿತ್ತು. ಹೊಸ ಮೈಸೂರು ರಾಜ್ಯವು ರಚನೆಯಾದ ಕಾರಣ, ಒಂದು ಕೋಟಿ ರೂಪಾಯಿ ಮೊತ್ತದ ಒಂದು ಹೊಸ ಸಾದಿಲ್ವಾರು ನಿಧಿಯನ್ನು ಸ್ಥಾಪಿಸುವುದು ಅವಶ್ಯವಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ) ದಿನಾಂಕ 16ನೇ ಮಾರ್ಚ್, 1957, ಭಾಗ -IV 2ಎ, ಸಂಖ್ಯೆ 60. ಪುಟ 2ರಲ್ಲಿ ಪ್ರಕಟಿಸಲಾಗಿದೆ.)

II

1958ರ ತಿದ್ದುಪಡಿ ಮಾಡುವ ಅಧಿನಿಯಮ 3.- ಲಭ್ಯವಿಲ್ಲ.

III

1961ರ ತಿದ್ದುಪಡಿ ಮಾಡುವ ಅಧಿನಿಯಮ 15.- ಲಭ್ಯವಿಲ್ಲ.

IV

1965ರ ತಿದ್ದುಪಡಿ ಮಾಡುವ ಅಧಿನಿಯಮ 20.- ಮೈಸೂರು ಸಾದಿಲ್ವಾರು ನಿಧಿ ಅಧಿನಿಯಮ, 1957ರ 2ನೇ ಪ್ರಕರಣದ ಅನುಸಾರ, ಎರಡು ಕೋಟಿ ರೂಪಾಯಿ ಮೊತ್ತವನ್ನು ರಾಜ್ಯದ ಸಂಚಿತ ನಿಧಿಯಿಂದ ಸಾದಿಲ್ವಾರು ನಿಧಿಗೆ ಸಂದಾಯ ಮಾಡಬಹುದಾಗಿದೆ. ಈ ಮೊತ್ತವು ಆಹಾರ ಕಾರ್ಯಾಚರಣೆಗಳಿಗೆ ಅಥವಾ ವಿಧಾನ ಮಂಡಲವು ಬಜೆಟ್‌ನ್ನು ಅಂಗೀಕರಿಸಿದ ತರುವಾಯ ಭಾರತ ಸರ್ಕಾರದಿಂದ ಹೆಚ್ಚುವರಿ ನೆರವು ಮಂಜೂರಾಗುವ ಯೋಜನೆಗಳಿಗೆ ಅಥವಾ ಇತರ ಅನಿವಾರ್ಯ ಸಂದರ್ಭಗಳಿಗೆ ತುರ್ತು ಸಂದಾಯಗಳನ್ನು ಮಾಡಲು ಸಾಕಾಗುವುದಿಲ್ಲವೆಂದು ಕಂಡುಬಂದಿರುವುದರಿಂದ, ಸಾದಿಲ್ವಾರು ನಿಧಿಗೆ ಸಂದಾಯ ಮಾಡಬೇಕಾದ ಮೊತ್ತವನ್ನು ಎರಡು ಕೋಟಿ ರೂಪಾಯಿಯಿಂದ ನಾಲ್ಕು ಕೋಟಿ ರೂಪಾಯಿಗೆ ಹೆಚ್ಚಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಇತರ ನೆರೆರಾಜ್ಯಗಳಲ್ಲಿ ಮೂಲ ಸಾದಿಲ್ವಾರು ನಿಧಿಯನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.-

ಮಹಾರಾಷ್ಟ್ರ .... ಏಳುಕೋಟಿ ರೂ.
ಮದರಾಸು .... ಐದು ಕೋಟಿ ರೂ.
ಆಂಧ್ರ ಪ್ರದೇಶ .... ಐದು ಕೋಟಿ ರೂ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ) ದಿನಾಂಕ 11ನೇ ಅಕ್ಟೋಬರ್, 1995, ಭಾಗ IV, 2ಎ, ಸಂಖ್ಯೆ 189, ಪುಟ 2ರಲ್ಲಿ ಪ್ರಕಟಿಸಲಾಗಿದೆ.)

V

1973ರ ತಿದ್ದುಪಡಿ ಮಾಡುವ ಅಧಿನಿಯಮ 1.- ಮೈಸೂರು ಸಾದಿಲ್ವಾರು ನಿಧಿ ಅಧಿನಿಯಮ, 1957ರ 2ನೇ ಪ್ರಕರಣದ ಅನುಸಾರ, ನಾಲ್ಕು ಕೋಟಿ ರೂಪಾಯಿ ಮೊತ್ತವನ್ನು ರಾಜ್ಯ ಸಂಚಿತ ನಿಧಿಯಿಂದ ಸಾದಿಲ್ವಾರು ನಿಧಿಗೆ ಸಂದಾಯ ಮಾಡಬಹುದಾಗಿದೆ. ರಾಜ್ಯದ ಹಲವು ಭಾಗಗಳಲ್ಲಿ ರಾಜ್ಯ ಸರ್ಕಾರವು ಕೈಗೊಳ್ಳುವ ಅಭಾವ ಪರಿಹಾರ ಕಾರ್ಯಾಚರಣೆಗೆ ತುರ್ತುಸಂದಾಯಗಳನ್ನು ಮಾಡಲು ಈ ಮೊತ್ತವು ಸಾಕಾಗುವುದಿಲ್ಲವೆಂದು ಕಂಡುಬಂದಿದೆ.ಆದ್ದರಿಂದ ಸಾದಿಲ್ವಾರು ನಿಧಿಯ ಮೂಲ ಹಣವನ್ನು ಮೈಸೂರು ಸಾದಿಲ್ವಾರು ನಿಧಿ (ತಾತ್ಕಾಲಿಕ) (ತಿದ್ದುಪಡಿ) ಅಧ್ಯಾದೇಶ, 1972ರ ಉದ್ಘೋಷಣೆಯ ಮೂಲಕ ಹತ್ತು ಕೋಟಿ ರೂಪಾಯಿಗೆ ತಾತ್ಕಾಲಿಕವಾಗಿ ಹೆಚ್ಚಿಸಲಾಗಿತ್ತು. ಈಗ, ಸಾದಿಲ್ವಾರು ನಿಧಿಗೆ ಸಂದಾಯ ಮಾಡಬೇಕಾದ ಮೊತ್ತವನ್ನು ನಾಲ್ಕುಕೋಟಿ ರೂಪಾಯಿಯಿಂದ ಶಾಶ್ವತ ಕ್ರಮವಾಗಿ ಹತ್ತುಕೋಟಿ ರೂಪಾಯಿಗೆ ಹೆಚ್ಚಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಈ ಮುಂದಿನ ರಾಜ್ಯಗಳಲ್ಲಿ ಸಾದಿಲ್ವಾರು ನಿಧಿಯ ಮೂಲಧನವನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ,-

ತಮಿಳುನಾಡು ....ಹತ್ತುಕೋಟಿ ರೂ.
ಗುಜರಾತ್ ....ಇಪ್ಪತ್ತು ಕೋಟಿ ರೂ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ), ದಿನಾಂಕ 12ನೇ ಡಿಸೆಂಬರ್, 1972, ಭಾಗ – IV 2ಎ, ಸಂಖ್ಯೆ 597, ಪುಟ 3ರಲ್ಲಿ ಪ್ರಕಟಿಸಲಾಗಿದೆ.)

VI

1976ರ ತಿದ್ದುಪಡಿ ಮಾಡುವ ಅಧಿನಿಯಮ 62.- ಭಾರತ ಸಂವಿಧಾನದ 267 (2)ನೇ ಅನುಚ್ಛೇದವು ರಾಜ್ಯದ ಸಲುವಾಗಿ ಸಾದಿಲ್ವಾರು ನಿಧಿಯನ್ನು ಸ್ಥಾಪಿಸಲು ಉಪಬಂಧ ಕಲ್ಪಿಸುತ್ತದೆ. 1957ರ ಕರ್ನಾಟಕ ಸಾದಿಲ್ವಾರು ನಿಧಿ ಅಧಿನಿಯಮದ 2ನೇ ಪ್ರಕರಣದ ಅನುಸಾರ, ಹತ್ತುಕೋಟಿ ರೂಪಾಯಿಯನ್ನು ರಾಜ್ಯ ಸಂಚಿತ ನಿಧಿಯಿಂದ ಸಾದಿಲ್ವಾರು ನಿಧಿಗೆ ಸಂದಾಯ ಮಾಡಬಹುದಾಗಿದೆ.ಈ ಮೊತ್ತವು ಅಭಾವ ಪರಿಹಾರ ಕಾರ್ಯಕ್ರಮಗಳು ಮತ್ತು ಇತರ ಅಭಿವೃದ್ಧಿ ಚಟುವಟಿಕೆಗಳಿಗೆ ತುರ್ತು ಸಂದಾಯಗಳನ್ನು ಮಾಡಲು ಸಾಕಾಗುವುದಿಲ್ಲವೆಂದು ಕಂಡುಬಂದಿದೆ.ಸಾದಿಲ್ವಾರು ನಿಧಿಯ ಮೂಲ ಧನವನ್ನು ಕರ್ನಾಟಕ ಸಾದಿಲ್ವಾರು ನಿಧಿ (ತಾತ್ಕಾಲಿಕ) (ತಿದ್ದುಪಡಿ) ಅಧ್ಯಾದೇಶದ ಉದ್ಘೋಷಣೆಯ ಮೂಲಕ ಇಪ್ಪತ್ತು ಕೋಟಿ ರೂ.ಗಳಿಗೆ

ತಾತ್ಕಾಲಿಕವಾಗಿ ಹೆಚ್ಚಿಸಲಾಗಿತ್ತು.ಈಗ, ಸಾದಿಲ್ವಾರು ನಿಧಿಗೆ ಸಂದಾಯ ಮಾಡತಕ್ಕ ಮೊತ್ತವನ್ನು ಶಾಶ್ವತ ಕ್ರಮವಾಗಿ ಹತ್ತು ಕೋಟಿ ರೂಪಾಯಿಯಿಂದ ಇಪ್ಪತ್ತು ಕೋಟಿ ರೂಪಾಯಿಗೆ ಹೆಚ್ಚಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1976ರ ಎಲ್.ಎ.ವಿಧೇಯಕ ಸಂಖ್ಯೆ 58, ಕಡತ ಸಂಖ್ಯೆ ಲಾ 97 ಎಲ್‌ಜಿಎನ್ 76 ರಿಂದ ಪಡೆಯಲಾಗಿದೆ.)

VII

1981ರ ತಿದ್ದುಪಡಿ ಮಾಡುವ ಅಧಿನಿಯಮ 2.- ವಿಧಾನ ಮಂಡಲದ ಮಂಜೂರಾತಿಯ ನಿರೀಕ್ಷೆಯಲ್ಲಿ ತುರ್ತು ಸಂದಾಯಗಳನ್ನು ಭರಿಸಲು ಸಾದಿಲ್ವಾರು ನಿಧಿಯ ಮೂಲಧನವನ್ನು 20 ಕೋಟಿ ರೂಪಾಯಿಯಿಂದ 35 ಕೋಟಿ ರೂಪಾಯಿಗೆ ಹೆಚ್ಚಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜಪತ್ರದ (ವಿಶೇಷ ಸಂಚಿಕೆ), ದಿನಾಂಕ 6ನೇ ಫೆಬ್ರುವರಿ, 1981, ಭಾಗ –IV 2ಎ, ಸಂಖ್ಯೆ 112. ಪುಟ.3 ರಲ್ಲಿ ಪ್ರಕಟಿಸಲಾಗಿದೆ.)

VIII

1984ರ ತಿದ್ದುಪಡಿ ಮಾಡುವ ಅಧಿನಿಯಮ 21.- ಸಾದಿಲ್ವಾರು ನಿಧಿಯ ಮೂಲಧನವನ್ನು ವಿಧಾನ ಮಂಡಲದ ಮಂಜೂರಾತಿಯ ನಿರೀಕ್ಷೆಯಲ್ಲಿ ``ಹೊಸ ಸೇವೆಯ'' ಮೇಲಿನ ತುರ್ತು ಸಂದಾಯಗಳನ್ನು ಭರಿಸಲು 35 ಕೋಟಿ ರೂಪಾಯಿಯಿಂದ 60 ಕೋಟಿ ರೂಪಾಯಿಗೆ ಹೆಚ್ಚಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ), ದಿನಾಂಕ 22ನೇ ಫೆಬ್ರುವರಿ, 1984, ಭಾಗ –IV 2ಎ, ಸಂಖ್ಯೆ 135, ಪುಟ 3ರಲ್ಲಿ ಪ್ರಕಟಿಸಲಾಗಿದೆ.)

IX

1985ರ ತಿದ್ದುಪಡಿ ಮಾಡುವ ಅಧಿನಿಯಮ 31.- ಸಾದಿಲ್ವಾರು ನಿಧಿಯ ಮೂಲಧನವನ್ನು ವಿಧಾನ ಮಂಡಲದ ಮಂಜೂರಾತಿಯ ನಿರೀಕ್ಷೆಯಲ್ಲಿ ತುರ್ತು ಸಂದಾಯಗಳನ್ನು ಭರಿಸಲು 60 ಕೋಟಿ ರೂಪಾಯಿಯಿಂದ 80 ಕೋಟಿ ರೂಪಾಯಿಗೆ ಹೆಚ್ಚಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ), ದಿನಾಂಕ 7ನೇ ಆಗಸ್ಟ 1985, ಭಾಗ- IV 2ಎ, ಸಂಖ್ಯೆ 429. ಪುಟ 3 ರಲ್ಲಿ ಪ್ರಕಟಿಸಲಾಗಿದೆ.)

X

ತಿದ್ದುಪಡಿ ಅಧಿನಿಯಮ ಸಂಖ್ಯೆ 2020ರ 19.-ರಾಜ್ಯದ ಸಂಚಿತ ನಿಧಿಯಿಂದ ಕರ್ನಾಟಕ ಸಾದಿಲ್ವಾರು ನಿಧಿಗೆ ಪಾವತಿಸಬೇಕಾದ ಮೊತ್ತವನ್ನು ಹೆಚ್ಚಿಸುವುದಕ್ಕೆ,-

(i) ಸಾಂಕ್ರಾಮಿಕ ರೋಗಗಳು, ನೈಸರ್ಗಿಕ ವಿಪತ್ತುಗಳು ಮುಂತಾದ ಅಂಥ ತುರ್ತು ಸನ್ನಿವೇಶಗಳಲ್ಲಿ, ಯಾವುದೇ ಆಯವ್ಯಯ ನಿಧಿಗಳು ಇಲ್ಲದಿರುವಾಗ ಅದನ್ನು ಬಿಡುಗಡೆಗೊಳಿಸಲು. ಸಾದಿಲ್ವಾರು ನಿಧಿಯಿಂದ ಅಂಥ ನಿಧಿಗಳನ್ನು ವಿಧಾನಮಂಡಲದ ಅನುಮೋದನೆ ಇಲ್ಲದೆ ಬಳಸಬಹುದಾಗಿದ್ದು, ಕಳೆದ ಎರಡು ವರ್ಷಗಳಲ್ಲಿ ಸಾದಿಲ್ವಾರು ನಿಧಿಯ ಮಿತಿಯನ್ನು ಅಧ್ಯಾದೇಶದ ಮೂಲಕ ತಾತ್ಕಾಲಿಕವಾಗಿ ಹೆಚ್ಚಿಸಲಾಗಿದೆ. ಕಳೆದ 35 ವರ್ಷಗಳಿಂದ ಸಾದಿಲ್ವಾರು ನಿಧಿಯ ಮಿತಿಯು ರೂ.80.00 ಕೋಟಿಗಳು ಇರುವುದರಿಂದ, ಸಾದಿಲ್ವಾರು ನಿಧಿಯ ಮೊತ್ತವನ್ನು ರೂ. 500.00 ಕೋಟಿಗಳಿಗೆ ಹೆಚ್ಚಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ; ಮತ್ತು

(ii) ಪ್ರತಿ ಆಟೋ ಅಥವಾ ಟ್ಯಾಕ್ಸಿ ಚಾಲಕರು, ಕ್ಷೌರಿಕರು, ಅಗಸರು ಇವರಿಗೆ ರೂ.5,000/- ಮತ್ತು ಹೂ ಬೆಳೆಗಾರರಿಗೆ ಪ್ರತಿ ಹೆಕ್ಟೇರ್‌ಗೆ ರೂ. 25,000/- ಹಾಗೂ ಹಣ್ಣು ಮತ್ತು ತರಕಾರಿಗಳ ಬೆಳೆಗಾರರಿಗೆ ಪ್ರತಿ ಹೆಕ್ಟೇರ್‌ಗೆ ರೂ. 15,000/-ಗಳನ್ನು ಪಾವತಿಸಲು ಪ್ರಸ್ತಾವಿಸಿರುವುದರಿಂದ, 2020-21ರ ಕೋವಿಡ್-19ರ ಕಾರಣದಿಂದಾಗಿ ಘೋಷಿಸಲಾದ ಅನೇಕ ಪ್ಯಾಕೇಜುಗಳಿಗೆ ಆಯವ್ಯಯದಲ್ಲಿ ಅವಕಾಶವಿಲ್ಲದಿರುವುದನ್ನು ಭರಿಸುವುದಕ್ಕಾಗಿ

- ಕರ್ನಾಟಕ ಸಾದಿಲ್ವಾರು ನಿಧಿ ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 11) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ವಿಷಯವು ತುರ್ತುಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ, ಮೇಲಿನ ಉದ್ದೇಶವನ್ನು ಸಾಧಿಸಲು ಕರ್ನಾಟಕ ಸಾದಿಲ್ವಾರು ನಿಧಿ(ತಿದ್ದುಪಡಿ) ಅಧ್ಯಾದೇಶ, 2020ನ್ನು (2020ರ ಕರ್ನಾಟಕ ಅಧ್ಯಾದೇಶ 14) ಪ್ರಖ್ಯಾಪಿಸಲಾಗಿತ್ತು.

ಈ ವಿಧೇಯಕವು ಅಧ್ಯಾದೇಶದ ಬದಲಿ ವಿಧೇಯಕವಾಗಿದೆ.

ಆದ್ದರಿಂದ ಈ ವಿಧೇಯಕ.

[2020ರ ವಿಧಾನಸಭೆಯ ವಿಧೇಯಕ ಸಂಖ್ಯೆ:52, ಕಡತ ಸಂಖ್ಯೆ: ಸಂವ್ಯಶಾಇ 62ಶಾಸನ 2020]
[ಭಾರತ ಸಂವಿಧಾನದ ಅನುಚ್ಛೇದ 267ರ ಖಂಡ (2)]
[ಕರ್ನಾಟಕ ರಾಜ್ಯ ಪತ್ರದ ಭಾಗ-IV, ವಿಶೇಷ ಪತ್ರಿಕೆ ಸಂಖ್ಯೆ: 458 ದಿನಾಂಕ: 15.10.2020ರಲ್ಲಿ ಪ್ರಕಟಣೆಗೊಂಡಿದೆ]

1957ರ [1][ಕರ್ನಾಟಕ][1] ಅಧಿನಿಯಮ ಸಂಖ್ಯೆ 11

(1957ರ ಏಪ್ರಿಲ್ ಒಂದನೇ ದಿನದಂದು [1][ಕರ್ನಾಟಕ ರಾಜ್ಯಪತ್ರ][1] ದಲ್ಲಿ ಮೊದಲು ಪ್ರಕಟವಾಗಿದೆ)

[1][ಕರ್ನಾಟಕ][1] ಸಾದಿಲ್ವಾರು ನಿಧಿ ಅಧಿನಿಯಮ, 1957

(1957ರ ಮಾರ್ಚ್ ಮೂವತ್ತೊಂದನೇ ದಿನದಂದು ರಾಜ್ಯಪಾಲರ ಅನುಮತಿ ಪಡೆದಿದೆ.)

(1958ರ 3, 1961ರ 15, 1965ರ 20, 1973ರ 1, 1976ರ 62, 1981ರ 2, 1984ರ 21 ,1985ರ 31ಮತ್ತು 2020ರ 19- ಈ ಅಧಿನಿಯಮಗಳ ಮೂಲಕ ತಿದ್ದುಪಡಿಯಾಗಿದೆ).

[1][ಕರ್ನಾಟಕ ರಾಜ್ಯ][1] ಕ್ಕಾಗಿ ಸಾದಿಲ್ವಾರು ನಿಧಿಯನ್ನು ಸ್ಥಾಪಿಸುವುದಕ್ಕೆ ಉಪಬಂಧ ಕಲ್ಪಿಸುವ ಅಧಿನಿಯಮ.

ಭಾರತ ಸಂವಿಧಾನದ 267ನೇ ಅನುಚ್ಛೇದದ (2)ನೇ ಖಂಡದಲ್ಲಿ ಒಂದು ರಾಜ್ಯದ ವಿಧಾನ ಮಂಡಲವು ಕಾನೂನಿನ ಮೂಲಕ ಕೈಹಣದ ಸ್ವರೂಪದಲ್ಲಿ ಸಾದಿಲ್ವಾರು ನಿಧಿಯನ್ನು ಸ್ಥಾಪಿಸಬಹುದೆಂದು ಉಪಬಂಧ ಕಲ್ಪಿಸಲಾಗಿರುವುದರಿಂದ;

ಮತ್ತು [1][ಕರ್ನಾಟಕ ರಾಜ್ಯ][1]ಕ್ಕೆ ಅಂಥ ಒಂದು ಸಾದಿಲ್ವಾರು ನಿಧಿಯನ್ನು ಸ್ಥಾಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಂಟನೇ ವರ್ಷದಲ್ಲಿ [1][ಕರ್ನಾಟಕ ರಾಜ್ಯ ವಿಧಾನ ಮಂಡಲ][1] ದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು.-

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

1. ಚಿಕ್ಕ ಹೆಸರು.- ಈ ಅಧಿನಿಯಮವನ್ನು [1][ಕರ್ನಾಟಕ][1] ಸಾದಿಲ್ವಾರು ನಿಧಿ ಅಧಿನಿಯಮ, 1957 ಎಂದು ಕರೆಯತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

2. ಸಾದಿಲ್ವಾರು ನಿಧಿಯ ಸ್ಥಾಪನೆ.-[1][ಕರ್ನಾಟಕ ರಾಜ್ಯ][1] ಕ್ಕಾಗಿ [1][ಕರ್ನಾಟಕ ರಾಜ್ಯ] [1]ದ ಸಾದಿಲ್ವಾರು ನಿಧಿ ಎಂದು ಕರೆಯಲಾಗುವ ಕೈಹಣದ ಸ್ವರೂಪದ ಸಾದಿಲ್ವಾರು ನಿಧಿಯನ್ನು ಸ್ಥಾಪಿಸತಕ್ಕದ್ದು ಮತ್ತು ಅದಕ್ಕೆ ರಾಜ್ಯದ ಸಂಚಿತ ನಿಧಿಯಿಂದ [3][[2][ಐದುನೂರುಕೋಟಿ][2]][3] ಮೊತ್ತವು ಸಂದಾಯವಾಗತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.
2. 1985ರ ಅಧಿನಿಯಮ 31ರ ಮೂಲಕ ದಿನಾಂಕ 12.6.1985 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2020ರ ಅಧಿನಿಯಮ 19ರ ಮೂಲಕ ದಿನಾಂಕ 14.07.2020 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ

3. ಸಾದಿಲ್ವಾರು ನಿಧಿಯ ಅಭಿರಕ್ಷೆ ಮತ್ತು ಅದರಿಂದ ಹಣ ಹಿಂತೆಗೆಯುವುದು.- [1][ಕರ್ನಾಟಕ ರಾಜ್ಯ][1]ದ ಸಾದಿಲ್ವಾರು ನಿಧಿಯನ್ನು [1][ಕರ್ನಾಟಕ ಸರ್ಕಾರದ][1] ಹಣಕಾಸು ಇಲಾಖೆಯ ಕಾರ್ಯದರ್ಶಿಯು ರಾಜ್ಯಪಾಲರ ಪರವಾಗಿ ಧಾರಣ ಮಾಡಿರತಕ್ಕದ್ದು ಮತ್ತು ಅನಿರೀಕ್ಷಿತ ವೆಚ್ಚಗಳನ್ನು ಕಾನೂನಿನ ಮೂಲಕ ಮಾಡಲಾದ ಧನ ವಿನಿಯೋಗದ ಮೇರೆಗೆ ರಾಜ್ಯ ವಿಧಾನ ಮಂಡಲವು ಅಧಿಕೃತಗೊಳಿಸುವ ನಿರೀಕ್ಷೆಯಲ್ಲಿ ಅಂಥ ವೆಚ್ಚಗಳನ್ನು ಭರಿಸುವ ಉದ್ದೇಶಗಳಿಗಾಗಿ ಹೊರತು ಅಂಥ ನಿಧಿಯಿಂದ ಯಾವುದೇ ಮುಂಗಡಗಳನ್ನು ನೀಡತಕ್ಕದ್ದಲ್ಲ.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

4. ನಿಯಮ ರಚನಾಧಿಕಾರ.- ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಸಲುವಾಗಿ, ರಾಜ್ಯ ಸರ್ಕಾರವು [1][ಕರ್ನಾಟಕ ರಾಜ್ಯ][1]ದ ಸಾದಿಲ್ವಾರು ನಿಧಿಯ ಅಭಿರಕ್ಷೆ, ಅದಕ್ಕೆ ಹಣ ಸಂದಾಯ ಮಾಡುವುದು ಮತ್ತು ಅದರಿಂದ ಹಣ

ಹಿಂತೆಗೆಯುವುದು-ಇವುಗಳಿಗೆ ಸಂಬಂಧಿಸಿದ ಅಥವಾ ಆನುಷಂಗಿಕವಾದ ಎಲ್ಲ ವಿಷಯಗಳನ್ನು ವಿನಿಯಮಿಸುವ ನಿಯಮಗಳನ್ನು ರಚಿಸಬಹುದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

ಕರ್ನಾಟಕ ಸಾದಿಲ್ವಾರು ನಿಧಿ ನಿಯಮಗಳು, 1957

(ಕರ್ನಾಟಕ ರಾಜ್ಯಪತ್ರ ಭಾಗ- I, ದಿನಾಂಕ:11.07.1957, ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 65 ಬಿಯುಡಿ 57, ದಿನಾಂಕ 2ನೇ ಜುಲೈ 1957 ಮತ್ತು ಜಿಎಸ್‌ಆರ್ 770 ದಿನಾಂಕ: 30.11.1965 ಹಾಗೂ ಜಿಎಸ್‌ಆರ್ 415 ದಿನಾಂಕ: 28.11.1968 ರಿಂದ ತಿದ್ದುಪಡಿಯಾದಂತೆ)

ಕರ್ನಾಟಕ ಸಾದಿಲ್ವಾರು ನಿಧಿ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ 4ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತದೆ:-

1. ಈ ನಿಯಮಗಳನ್ನು ``ಕರ್ನಾಟಕ ಸಾದಿಲ್ವಾರು ನಿಧಿ ನಿಯಮಗಳು, 1957'' ಎಂದು ಕರೆಯತಕ್ಕದ್ದು.

2. ಈ ನಿಯಮಗಳಲ್ಲಿ ``ನಿಧಿ'' ಎಂದರೆ, ಕರ್ನಾಟಕ ರಾಜ್ಯದ ಸಾದಿಲ್ವಾರು ನಿಧಿ.

3. (1) ನಿಧಿಯಿಂದ ಮುಂಗಡಗಳನ್ನು ಕೋರಿ ಸಲ್ಲಿಸುವ ಎಲ್ಲಾ ಅರ್ಜಿಗಳನ್ನು ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯ ಕಾರ್ಯದರ್ಶಿಗೆ ಸಲ್ಲಿಸತಕ್ಕದ್ದು.

(2) ಪ್ರತಿಯೊಂದು ಅರ್ಜಿಯೊಂದಿಗೆ ಈ ಕೆಳಕಂಡವುಗಳನ್ನು ನೀಡತಕ್ಕದ್ದು,-

(ಎ) ಒಳಗೊಳ್ಳುವ ಹೆಚ್ಚುವರಿ ವೆಚ್ಚದ ಸಂಕ್ಷಿಪ್ತ ವಿವರಗಳು;

(ಬಿ) ಬಜೆಟ್‌ನಲ್ಲಿ ಏರ್ಪಾಡು ಮಾಡಲಾಗದುದಕ್ಕೆ ಕಾರಣವಾದ ಸಂದರ್ಭಗಳು;

(ಸಿ) ಇದನ್ನು ಮುಂದೂಡಲು ಏಕೆ ಸಾಧ್ಯವಿಲ್ಲ ಎಂಬುದನ್ನು;

(ಡಿ) ವರ್ಷಕ್ಕಾಗಿ ಅಥವಾ ಸಂದರ್ಭಾನುಸಾರ ವರ್ಷದ ಭಾಗಕ್ಕಾಗಿ ಸಲ್ಲಿಸಿದ ಪ್ರಸ್ತಾವದ ಪೂರ್ಣವೆಚ್ಚವೂ ಸೇರಿದಂತೆ ನಿಧಿಯಿಂದ ಮುಂಗಡವಾಗಿ ನೀಡಬೇಕಾಗಿರುವ ಮೊಬಲಗು; ಮತ್ತು

(ಇ) ಅಂತಿಮವಾಗಿ ಪೂರಕ ಏರ್ಪಾಟನ್ನು ಯಾವ ಅನುದಾನದ ಅಥವಾ ಧನವಿನಿಯೋಗದ ಮೇರೆಗೆ ಪಡೆಯಬಹುದು, ಎಂಬುದನ್ನು.

4. ವಾರ್ಷಿಕ ಹಣಕಾಸು ವಿವರ ಪಟ್ಟಿಯಲ್ಲಿ ಉದ್ದೇಶಿಸಿಲ್ಲದ ಹೊಸ ಸೇವೆಯ ಮೇಲಿನ ವೆಚ್ಚವೂ ಸೇರಿದಂತೆ ಅನಿರೀಕ್ಷಿತ ವೆಚ್ಚವನ್ನು ಭರಿಸುವ ಉದ್ದೇಶಕ್ಕಾಗಿ ನಿಧಿಯಿಂದ ಮುಂಗಡಗಳನ್ನು ನೀಡತಕ್ಕದ್ದು.

5. ನಿಧಿಯಿಂದ ಮುಂಗಡಗಳನ್ನು ಮಂಜೂರು ಮಾಡುವ ಎಲ್ಲ ಆದೇಶಗಳನ್ನು ರಾಜ್ಯಪಾಲರ ಆದೇಶಗಳಾಗಿದ್ದರೆ ಹೇಗೋ ಹಾಗೆ ಹೊರಡಿಸತಕ್ಕದ್ದು. ಮುಂಗಡವನ್ನು ಮಂಜೂರು ಮಾಡುವ ಆದೇಶಗಳು ಹಣದ ಮೊಬಲಗು, ಸಂಬಂಧಪಟ್ಟ ಅನುದಾನ ಅಥವಾ ಧನ ವಿನಿಯೋಜನೆಯನ್ನು ನಿರ್ದಿಷ್ಟಪಡಿಸತಕ್ಕದ್ದು ಮತ್ತು ಯಾವ ವೆಚ್ಚಗಳನ್ನು ಭರಿಸಲು

ಮಂಜೂರಾತಿ ನೀಡಲಾಗಿದೆಯೋ ಆ ವೆಚ್ಚಗಳ ಉಪಶೀರ್ಷಿಕೆಗಳು ಮತ್ತು ಧನ ವಿನಿಯೋಗದ ಘಟಕಗಳ ಸಂಕ್ಷಿಪ್ತ ವಿವರಗಳನ್ನು ನೀಡತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯ ಕಾರ್ಯದರ್ಶಿಯು ಕರ್ನಾಟಕದ ಮಹಾಲೇಖಾಪಾಲರು, ಬೆಂಗಳೂರು ಇವರಿಗೆ ಕಳುಹಿಸಿಕೊಡತಕ್ಕದ್ದು.

[1][6. (1) ಹಾಗೆ ಹಣಕಾಸು ನೀಡಲಾದ ವಾರ್ಷಿಕ ಹಣಕಾಸು ವಿವರಪಟ್ಟಿಯಲ್ಲಿ ಉದ್ದೇಶಿಸಿಲ್ಲದ ಹೊಸ ಸೇವೆಯ ಮೇಲಿನ ವೆಚ್ಚವೂ ಸೇರಿ, ಎಲ್ಲ ವೆಚ್ಚದ ಪೂರಕ ಅಂದಾಜುಗಳನ್ನು, (2)ನೇ ಉಪನಿಯಮದ ಉಪಬಂಧಗಳಿಗೆ ಅನುಸಾರವಾಗಿ ಮುಂಗಡವನ್ನು ಸಾದಿಲ್ವಾರು ನಿಧಿಗೆ ಪುನಃ ಒಪ್ಪಿಸಿದ್ದ ಹೊರತು, ಅಂಥ ಮುಂಗಡವನ್ನು ಮಂಜೂರು ಮಾಡಿದ ನಿಕಟೋತ್ತರದಲ್ಲಿ ಸೇರುವ ವಿಧಾನ ಮಂಡಲದ ಮೊದಲ ಅಧಿವೇಶನದಲ್ಲಿ ಮಂಡಿಸತಕ್ಕದ್ದು.

ವಿವರಣೆ (i):- ನಿಧಿಯಿಂದ ಹಣಕಾಸು ನೀಡಿದ ವೆಚ್ಚದ ಅಂದಾಜುಗಳನ್ನು ವಿಧಾನಮಂಡಲದಲ್ಲಿ ಮಂಡಿಸುವಾಗ ಅಂಥ ಅಂದಾಜುಗಳಿಗೆ ಈ ಮುಂದಿನಂತೆ ಒಂದು ಟಿಪ್ಪಣಿಯನ್ನು ಲಗತ್ತಿಸತಕ್ಕದ್ದು:

.... ರಲ್ಲಿ ಸಾದಿಲ್ವಾರು ನಿಧಿಯಿಂದ ....ರೂ.ಗಳ ಮೊತ್ತವನ್ನು ಮುಂಗಡವಾಗಿ ನೀಡಲಾಗಿದೆ ಮತ್ತು ಆ ನಿಧಿಗೆ ಮರುಸಂದಾಯ ಮಾಡಲು ಸಮನಾದ ಮೊತ್ತದ ಅಗತ್ಯವಿದೆ.

ವಿವರಣೆ (ii):- ವಾರ್ಷಿಕ ಹಣಕಾಸು ವಿವರ ಪಟ್ಟಿಯಲ್ಲಿ ಉದ್ದೇಶಿಸಿಲ್ಲದ ಹೊಸ ಸೇವೆಯ ಮೇಲಿನ ವೆಚ್ಚವನ್ನು ಪೂರ್ಣವಾಗಿ ಅಥವಾ ಭಾಗಶಃ ಅಧಿಕೃತ ಧನವಿನಿಯೋಜನೆಯಲ್ಲಿ ಲಭ್ಯವಿರುವ ಉಳಿತಾಯದಿಂದ ಭರಿಸಬಹುದಾಗಿರುವಲ್ಲಿ, ಸಲ್ಲಿಸಲಾಗುವ ಅಂದಾಜಿಗೆ ಈ ಮುಂದಿನ ನಮೂನೆಯಲ್ಲಿ ಒಂದು ಟಿಪ್ಪಣಿಯನ್ನು ಲಗತ್ತಿಸತಕ್ಕದ್ದು:

`ಈ ವೆಚ್ಚವನ್ನು ಹೊಸ ಸೇವೆಗೆ ಮಾಡಲಾಗಿದೆ .... ರಲ್ಲಿ ಸಾದಿಲ್ವಾರು ನಿಧಿಯಿಂದ .... ರೂ.ಗಳ ಮೊತ್ತವನ್ನು ಮುಂಗಡವಾಗಿ ನೀಡಲಾಗಿದೆ ಮತ್ತು ಆ ನಿಧಿಗೆ ಹಣ ಮರುಸಂದಾಯ ಮಾಡಲು ಅನುಕೂಲವಾಗುವಂತೆ ಸಮನಾದ ಮೊತ್ತವು ಅಗತ್ಯವಾಗಿ ಬೇಕಾಗಿದೆ. ಆ ಮೊತ್ತವನ್ನು/ ಆ ಮೊತ್ತದ ಭಾಗವನ್ನು, ಎಂದರೆ .... ರೂ.ಗಳನ್ನು ಅನುದಾನಗಳಲ್ಲಿ ಉಂಟಾದ ಉಳಿತಾಯಗಳ ಮರುವಿನಿಯೋಗದಿಂದ ಭರಿಸಬಹುದು ಮತ್ತು ಲೇಖಾನುದಾನದಿಂದ ಪಡೆಯಬಹುದು. ಉಳಿದ ಮೊತ್ತಕ್ಕೆ, ಎಂದರೆ, ... ರೂ.ಗಳಿಗೆ ಮಾತ್ರ ಲೇಖಾನುದಾನವು ಅಗತ್ಯವಿದೆ'.

(2) ವಿಧಾನ ಮಂಡಲವು ಪೂರಕ ಧನವಿನಿಯೋಗ ಅಧಿನಿಯಮದ ಮೂಲಕ ಹೆಚ್ಚುವರಿ ವೆಚ್ಚವನ್ನು ಅಧಿಕೃತಗೊಳಿಸಿದ ಕೂಡಲೇ ಪೂರಕ ಅಂದಾಜುಗಳನ್ನು ವಿಧಾನಮಂಡಲದಲ್ಲಿ ಮಂಡಿಸುವುದಕ್ಕೆ ಮೊದಲು ಭರಿಸಿದ ಅಥವಾ ಅವುಗಳನ್ನು ಹಾಗೆ ಮಂಡಿಸಿದ ನಂತರ ಭರಿಸಿದ ವೆಚ್ಚವನ್ನು ತೂಗಿಸಲು ಸಾದಿಲ್ವಾರು ನಿಧಿಯಿಂದ ನೀಡಲಾದ ಮುಂಗಡ ಅಥವಾ ಮುಂಗಡಗಳು ಅಧಿನಿಯಮದಲ್ಲಿ ಮಾಡಲಾದ ವಿನಿಯೋಗದ ಪೂರ್ಣ ಪ್ರಮಾಣದ ಮೊತ್ತವು ನಿಧಿಗೆ ಪುನಃ ವಾಪಸಾಗತಕ್ಕದ್ದು.][1]

1. ನಿಯಮ 6ನ್ನು ಜಿಎಸ್‌ಆರ್ 770 ದಿನಾಂಕ: 30.11.1965ರ ಮೂಲಕ ಪ್ರತಿಯೋಜಿಸಲಾಗಿದೆ.

7. 5ನೇ ನಿಯಮಕ್ಕೆ ಅನುಸಾರವಾಗಿ ನಿಧಿಯಿಂದ ಮುಂಗಡವನ್ನು ಮಂಜೂರು ಮಾಡುವ ಆದೇಶವನ್ನು ಹೊರಡಿಸಿದ ತರುವಾಯ ಮತ್ತು 6ನೇ ನಿಯಮಕ್ಕೆ ಅನುಸಾರವಾಗಿ ಕ್ರಮ ಕೈಗೊಳ್ಳುವ ಮೊದಲು ಯಾವುದೇ ಸಂದರ್ಭದಲ್ಲಿ, ಮಂಜೂರಾದ ಮುಂಗಡವು ಪೂರ್ಣವಾಗಿ ಅಥವಾ ಭಾಗಶಃ ಉಪಯೋಗವಾಗದೆ ಉಳಿಯುವುದೆಂದು ಕಂಡುಬಂದರೆ,

ಮಂಜೂರಾತಿಯನ್ನು ರದ್ದುಗೊಳಿಸುವುದಕ್ಕಾಗಿ ಅಥವಾ ಸಂದರ್ಭಾನುಸಾರ ಅದನ್ನು ಮಾರ್ಪಾಟು ಮಾಡುವುದಕ್ಕಾಗಿ ಮಂಜೂರಾತಿ ಪ್ರಾಧಿಕಾರಕ್ಕೆ ಒಂದು ಅರ್ಜಿಯನ್ನು ಸಲ್ಲಿಸತಕ್ಕದ್ದು.

[1][8. ಆ ವರ್ಷದ ಬಜೆಟ್ ಅಂದಾಜುಗಳಲ್ಲಿ ಅವಶ್ಯ ಏರ್ಪಾಟುಗಳನ್ನು ಮಾಡಿದ `ಹೊಸ ಸೇವೆ' ಬಾಬುಗಳೂ ಸೇರಿದಂತೆ ಧನ ವಿನಿಯೋಗ (ಲೇಖಾನುದಾನ) ಅಧಿನಿಯಮದಲ್ಲಿ ಸೇರಿಸಲಾದ ಸೇವೆಗಳಿಗೆ ಏರ್ಪಾಟು ಮಾಡಿದ್ದಕ್ಕಿಂತ ಹೆಚ್ಚಿನ ವೆಚ್ಚವನ್ನು ಭರಿಸಲು ನಿಧಿಯಿಂದ ಮಂಜೂರು ಮಾಡಲಾದ ಎಲ್ಲ ಮುಂಗಡಗಳು, ನಿಧಿಯಿಂದ ನೀಡಲಾದ ಮುಂಗಡಗಳಿಂದ ಭರಿಸಲಾದ ಹೆಚ್ಚಿನ ವೆಚ್ಚವೂ ಸೇರಿದಂತೆ ಅದರಿಂದ ಭರಿಸಲಾದ ಇಡೀ ವರ್ಷದ ಸೇವೆಯ ಮೇಲಿನ ವೆಚ್ಚದ ಸಂಬಂಧದಲ್ಲಿ, ಧನ ವಿನಿಯೋಗ ಅಧಿನಿಯಮವು ಅನುಮೋದನೆಗೊಂಡ ಕೂಡಲೇ ನಿಧಿಗೆ ಪುನಃ ವಾಪಸಾಗತಕ್ಕದ್ದು. ಮೇಲೆ ಉಲ್ಲೇಖಿಸಿದ `ಹೊಸ ಸೇವೆ' ಬಾಬುಗಳಿಗಾಗಿ ನಿಧಿಯಿಂದ ಮುಂಗಡಗಳನ್ನು ನೀಡಿದ ಸಂದರ್ಭಗಳಲ್ಲಿ, ಅನುಬಂಧಿಸಲಾದ ನಮೂನೆ II ರಲ್ಲಿ ಹಣಕಾಸು ಇಲಾಖೆಯು ಒಂದು ವಿವರಪಟ್ಟಿಯನ್ನು ತಯಾರಿಸತಕ್ಕದ್ದು ಮತ್ತು ಅದನ್ನು ರಾಜ್ಯ ವಿಧಾನ ಮಂಡಲದಲ್ಲಿ ಆ ವರ್ಷದ ಧನ ವಿನಿಯೋಗ ವಿಧೇಯಕವನ್ನು ಮಂಡಿಸುವುದಕ್ಕೆ ಮುಂಚೆ ಮಂಡಿಸತಕ್ಕದ್ದು.][1]

1. ನಿಯಮ 8ನ್ನು ಜಿಎಸ್‌ಆರ್ 415 ದಿನಾಂಕ: 28.11.1968ರ ಮೂಲಕ ಪ್ರತಿಯೋಜಿಸಲಾಗಿದೆ.

9. ಮುಂಗಡವನ್ನು ವಾಪಸು ಪಡೆಯುವ ಆದೇಶವು ಮೂಲ ಮುಂಗಡವನ್ನು ನೀಡಿದ ಆದೇಶದ ಸಂಖ್ಯೆ ಮತ್ತು ದಿನಾಂಕ ಮತ್ತು 6ನೇ ನಿಯಮದಲ್ಲಿ ತಿಳಿಸಿದ ಪೂರಕ ಧನ ವಿನಿಯೋಗ ಅಧಿನಿಯಮದ ಉಲ್ಲೇಖವನ್ನು ಕೊಡತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯ ಕಾರ್ಯದರ್ಶಿಯು, ಕರ್ನಾಟಕದ ಮಹಾಲೇಖಪಾಲರು, ಬೆಂಗಳೂರು ಇವರಿಗೆ ಕಳುಹಿಸತಕ್ಕದ್ದು.

10. ನಿಧಿಯ ವ್ಯವಹಾರದ ಲೆಕ್ಕವನ್ನು ಹಣಕಾಸು ಇಲಾಖೆಯು ಈ ನಿಯಮಗಳಿಗೆ [1][ಲಗತ್ತಿಸಿದ ನಮೂನೆ-I ರಲ್ಲಿ][1] ನಿರ್ವಹಿಸತಕ್ಕದ್ದು.

1. ಜಿಎಸ್‌ಆರ್ 415 ದಿನಾಂಕ: 28.11.1968ರ ಮೂಲಕ ಪ್ರತಿಯೋಜಿಸಲಾಗಿದೆ.

11. ನಿಧಿಯಿಂದ ಮುಂಗಡಗಳಿಗಾಗಿ ಭರಿಸಲಾದ ವಾಸ್ತವಿಕ ವೆಚ್ಚವನ್ನು ಇಲಾಖೆಗಳು ನಿಧಿಗೆ ಸಂಬಂಧಪಟ್ಟ ಲೆಕ್ಕದಲ್ಲಿ, ಅವುಗಳನ್ನು ಸಂಚಿತ ನಿಧಿಯಿಂದ ಸಂದಾಯ ಮಾಡಿದ್ದರೆ ಆಗ ಹೇಗೆ ತೋರಿಸಲಾಗುತ್ತಿತ್ತೋ ಅದೇ ರೀತಿಯಲ್ಲಿ ವಿವರಿಸುವಂತೆ ದಾಖಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರಹೆಸರಿನಲ್ಲಿ,

ಸಹಿ/-
ಸರ್ಕಾರದ ಕಾರ್ಯದರ್ಶಿ,
ಹಣಕಾಸು ಇಲಾಖೆ.

[1][ನಮೂನೆ - I][1]

1. ಜಿಎಸಾರ್ 415 ದಿನಾಂಕ:28.11.1968ರ ಮೂಲಕ ಪುನರ್ ಅಂಕಿತಗೊಳಿಸಲಾಗಿದೆ.

ಕರ್ನಾಟಕ ರಾಜ್ಯದ ಸಾದಿಲ್ವಾರು ನಿಧಿ

ನಿಧಿಯ ಮೊತ್ತ.............ಇಪ್ಪತ್ತು ಕೋಟಿ ರೂಪಾಯಿ ಮಾತ್ರ

ಕ್ರ. ಸಂ	ವ್ಯವಹಾರದ ದಿನಾಂಕ	ಅನುದಾನದ ಅಥವಾ ಧನ ವಿನಿಯೋಗದ ಸಂಖ್ಯೆ ಮತ್ತು ಹೆಸರು	ಮುಂಗಡಕ್ಕಾಗಿ ಸಲ್ಲಿಸಲಾದ ಅರ್ಜಿಯ ಸಂಖ್ಯೆ ಮತ್ತು ದಿನಾಂಕ	ಮುಂಗಡ ನೀಡುವ ಆದೇಶದ ಸಂಖ್ಯೆ ಮತ್ತು ದಿನಾಂಕ	ಮುಂಗಡ ನೀಡದ ಮೊತ್ತ	ಹೆಚ್ಚುವರಿ ವೆಚ್ಚಕ್ಕಾಗಿ ಉಪಬಂಧಿಸುವ ಪೂರಕ ಧನ ವಿನಿಯೋಗ ಅಧಿನಿಯಮ	ವಾಪಸು ಪಡೆದ ಮುಂಗಡದ ಮೊತ್ತ	ನಗದು ವ್ಯವಹಾರದ ತರುವಾಯದ ಶಿಲ್ಕು	ಪ್ರಭಾರಿ ಅಧಿಕಾರಿಯ ಚಿಕ್ಕ ಸಹಿ	ಷರಾ
1	2	3	4	5	6	7	8	9	10	11

ಟಿಪ್ಪಣಿ: (1) ಪ್ರತಿಯೊಂದು ವ್ಯವಹಾರದ ತರುವಾಯ ಶಿಲ್ಕನ್ನು ತೋರಿಸತಕ್ಕದ್ದು.

(2) ಮುಂಗಡದ ಮೊತ್ತವನ್ನು ನೀಡಿದಾಗ ಕಪ್ಪು ಶಾಯಿಯಲ್ಲೂ ಮತ್ತು ವಾಪಸು ಪಡೆದಾಗ ಕೆಂಪು ಶಾಯಿಯಲ್ಲೂ ನಮೂದಿಸತಕ್ಕದ್ದು.

ನಮೂನೆ - II

.........ವರ್ಷದ ಬಜೆಟ್ ಅಂದಾಜಿನಲ್ಲಿ ಅವಶ್ಯ ಏರ್ಪಾಡುಗಳನ್ನು ಮಾಡಲಾಗಿದ್ದ "ಹೊಸ ಸೇವೆಯ" ಮೇಲಿನ ವೆಚ್ಚಕ್ಕೆ "ಲೇಖಾನುದಾನದ" ಅವಧಿಯಲ್ಲಿ ಸಾದಿಲ್ವಾರು ನಿಧಿಯಿಂದ ತೆಗೆಯಲಾದ ಮುಂಗಡಗಳನ್ನು ತೋರಿಸುವ ವಿವರ ಪಟ್ಟಿ.ಧನ ವಿನಿಯೋಗ ಅಧಿನಿಯಮವು ಅಂಗೀಕಾರವಾದ ನಂತರ ಮುಂಗಡವನ್ನು ನಿಧಿಗೆ ಮರು ಭರ್ತಿ ಮಾಡಲಾಗುವುದು.

ಸೇವೆಯ ವಿವರಗಳು	ಇಲಾಖೆಯ ಹೆಸರು	ಸಾದಿಲ್ವಾರು ನಿಧಿಯಿಂದ ನೀಡಲಾದ ಮುಂಗಡದ ಮೊತ್ತ	ವರ್ಷದ ಬಜೆಟ್ ಅಂದಾಜುಗಳಲ್ಲಿ ಏರ್ಪಾಟು ಇರುವ ಅನುದಾನದ ಸಂಖ್ಯೆ ಮತ್ತು ಹೆಸರು ಹಾಗೂ ಏರ್ಪಾಟಿನ ಮೊತ್ತ	ಅನುದಾನಿಗಳಿಂದ ಸಲ್ಲಿಸುವ ಬೇಡಿಕೆಯನ್ನು ವಿಧಾನ ಮಂಡಲವು ಪುರಸ್ಕರಿಸುವವರೆಗೆ ವೆಚ್ಚವನ್ನು ಮುಂದೂಡಲು ಏಕೆ ಸಾಧ್ಯವಾಗಲಿಲ್ಲ ಎಂಬ ಬಗ್ಗೆ ಸಂಕ್ಷಿಪ್ತ ಕಾರಣ

[ಸಂ.ಎಫ್.ಡಿ.5 ಬಿಸಿಎಫ್ 67]

ಮೈಸೂರು ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಟಿ.ಕೆ. ರಂಗರಾಜ ಅಯ್ಯಂಗಾರ್
ಉಪಕಾರ್ಯದರ್ಶಿ.

* * *

The above translation of the Karnataka Contingency Fund Act 1957 (11 of 57) and the Karnataka Contingency Fund Rules, 1957 shall be authoritative text in the Kannada Language under section 5A of the Karnataka Official Language Act, 1963 (Karnataka Act 26 of 1963)

GOVERNOR OF KARNATAKA
ಪಿ.ಆರ್. 1192 ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಜಿ.ಕೆ. ಬೋರೇಗೌಡ
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

2020 ರ ಕರ್ನಾಟಕ ಅಧಿನಿಯಮ ಸಂಖ್ಯೆ:19

ಕರ್ನಾಟಕ ಸಾದಿಲ್ವಾರು ನಿಧಿ (ತಿದ್ದುಪಡಿ) ಅಧಿನಿಯಮ, 2020

(2020 ರ ಅಕ್ಟೋಬರ್ ತಿಂಗಳ 15ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಸಾದಿಲ್ವಾರು ನಿಧಿ (ತಿದ್ದುಪಡಿ) ಅಧಿನಿಯಮ, 2020

(2020 ರ ಅಕ್ಟೋಬರ್ ತಿಂಗಳ 14ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ.)

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ, ಸಾಂಕ್ರಾಮಿಕ ರೋಗಗಳು, ನೈಸರ್ಗಿಕ ವಿಪತ್ತುಗಳು ಮುಂತಾದ ಅಂಥ ತುರ್ತು ಸನ್ನಿವೇಶಗಳಲ್ಲಿ, ಯಾವುದೇ ಆಯವ್ಯಯ ನಿಧಿಗಳು ಇಲ್ಲದಿರುವಾಗ ಅದನ್ನು ಬಿಡುಗಡೆಗೊಳಿಸಲು ರಾಜ್ಯದ ಸಂಚಿತ ನಿಧಿಯಿಂದ ಕರ್ನಾಟಕ ಸಾದಿಲ್ವಾರು ನಿಧಿಗೆ ಪಾವತಿಸ ಬೇಕಾದ ಮೊತ್ತವನ್ನು ಹೆಚ್ಚಿಸುವುದಕ್ಕೆ. ಸಾದಿಲ್ವಾರು ನಿಧಿಯಿಂದ ಅಂಥ ನಿಧಿಗಳನ್ನು ವಿಧಾನಮಂಡಲದ ಅನುಮೋದನೆ ಇಲ್ಲದೆ ಬಳಸಬಹುದಾಗಿದ್ದು, ಕಳೆದ ಎರಡು ವರ್ಷಗಳಲ್ಲಿ ಸಾದಿಲ್ವಾರು ನಿಧಿಯಮಿತಿಯನ್ನು ಅಧ್ಯಾದೇಶದ ಮೂಲಕ ತಾತ್ಕಾಲಿಕವಾಗಿ ಹೆಚ್ಚಿಸಲಾಗಿದೆ. ಕಳೆದ 35 ವರ್ಷಗಳಿಂದ ಸಾದಿಲ್ವಾರು ನಿಧಿಯ ಮಿತಿಯು ರೂ.80.00 ಕೋಟಿಗಳು ಇರುವುದರಿಂದ, ಸಾದಿಲ್ವಾರು ನಿಧಿಯ ಮೊತ್ತವನ್ನು ರೂ.500.00 ಕೋಟಿಗಳಿಗೆ ಹೆಚ್ಚಿಸುವುದು ಅಗತ್ಯವೆಂದು ಪರಿಗಣಿಸಲಾಗಿದ್ದು, ಕರ್ನಾಟಕ ಸಾದಿಲ್ವಾರು ನಿಧಿ ಅಧಿನಿಯಮ, 1957ನ್ನು (1957ರಕರ್ನಾಟಕಅಧಿನಿಯಮ11) ಮತ್ತಷ್ಟು ತಿದ್ದುಪಡಿ ಮಾಡುವುದುಯುಕ್ತವಾಗಿರುವುದರಿಂದ;

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ, ಕೋವಿಡ್ 19ರ ಕಾರಣದಿಂದಾಗಿ ಘೋಷಿಸಲಾದ ಅನೇಕ ಪ್ಯಾಕೇಜುಗಳಿಗೆ 202021ರ ಆಯವ್ಯಯದಲ್ಲಿ ಅವಕಾಶವಿಲ್ಲದಿರುವುದರಿಂದ, ಪ್ರತಿ ಆಟೋ ಅಥವಾ ಟ್ಯಾಕ್ಸಿ ಚಾಲಕರು, ಕ್ಷೌರಿಕರು, ಅಗಸರು ಇವರಿಗೆ ರೂ.5,000/-ಮತ್ತು ಹೂ ಬೆಳೆಗಾರರಿಗೆ ಪ್ರತಿಹೆಕ್ಟೇರ್‌ಗೆ ರೂ.25,000/- ಹಾಗೂ ಹಣ್ಣು ಮತ್ತು ತರಕಾರಿಗಳ ಬೆಳೆಗಾರರಿಗೆ ಪ್ರತಿ ಹೆಕ್ಟೇರ್‌ಗೆ ರೂ.15,000/ಗಳನ್ನು ಪಾವತಿಸಲು ಪ್ರಸ್ತಾವಿಸಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-(1) ಈ ಅಧಿನಿಯಮವನ್ನು ಕರ್ನಾಟಕ ಸಾದಿಲ್ವಾರು ನಿಧಿ (ತಿದ್ದುಪಡಿ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) **ಇದು** 2020**ರ ಜುಲೈ** 14**ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು**.

ಪ್ರಕರಣ 2ನ್ನು ಮೂಲ ಅಧಿನಿಯಮದಲ್ಲಿ ಇಂದೀಕರಿಸಲಾಗಿದೆ.

3. ನಿರಸನ ಮತ್ತು ಉಳಿಸುವಿಕೆಗಳು.- (1) ಕರ್ನಾಟಕ ಸಾದಿಲ್ವಾರು ನಿಧಿ (ತಿದ್ದುಪಡಿ) ಅಧ್ಯಾದೇಶ, 2020ನ್ನು (2020ರ ಕರ್ನಾಟಕ ಅಧ್ಯಾದೇಶ 14) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವು ಏನೇ ಒಳಗೊಂಡಿದ್ದರೂ ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಏನೇ ಮಾಡಿದ್ದರೂ ಅಥವಾ ಯಾವುದೇ ಕ್ರಮವನ್ನು ಕೈಗೊಂಡಿದ್ದರೂ ಈ ಅಧಿನಿಯಮದ ಅಡಿಯಲ್ಲಿ ತಿದ್ದುಪಡಿಯಾದಂತೆ ಅದನ್ನು ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

The above translation of the Karnataka Contingency Fund (Amendment) Act, 2020 (Karnataka Act 19 of 2020) shall be authoritative text in the Kannada language under section 5-A of the Karnataka Official Language Act, 1963 (Karnataka Act 26 of 1963).

ವಜುಭಾಯಿವಾಲ
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ
ಆದೇಶಸಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ದ್ವಾರಕನಾಥ್ ಬಾಬು)
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ